ಓಎಸ್ ನಂಃ 51/2016

ಡಿಡಬ್ಲೂ ಃ1

<u>ಸಾಕ್ಷಿಗೆ ದಿನಾಂಕ 20-06-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಂ.ವ್ಹಿ.ಎಲ್ ವಕೀಲರಿಂದ</u>

ನಾನು ಹುಟ್ಟಿದಾಗಿನಿಂದ ಜಹೀರಾಬಾದ ಊರಿನಲ್ಲಿ ವಾಸವಾಗಿದ್ದೇನೆ. ಜಹೀರಾಬಾದನಲ್ಲಿ ನನ್ನ ಸ್ವಂತ ಮನೆ ಇದೆ. ನನ್ನ ತಂದೆಯ ಹೆಸರು ಶಂಕರ ಆಗಿರುತ್ತದೆ. ನನ್ನ ತಂದೆಗೆ ಒಬ್ಬ ತಮ್ಮ ವಿಠಲ ಇರುತ್ತಾನೆ. ವಾದಿಯರು ಸದರಿ ವಿಠಲ ಇವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ನನ್ನ ತಂದೆಗೆ 3 ಜನ ಗಂಡ ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರು ದಾವೆಯಲ್ಲಿ 2 ರಿಂದ 9ನೇ ಪ್ರತಿವಾದಿಯೆಂದು ನಮೂದು ಮಾಡಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿ ನನ್ನ ತಾಯಿಯಾಗಿದ್ದು, ಅವರು ಈ ಪ್ರಕರಣ ಚಾಲ್ತಿಯಲ್ಲಿದ್ದಾಗ, ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆ ಮತ್ತು ವಿಠಲ ಇವರ ತಂದೆ ಹೆಸರು ಸುಬಾನಜೀ ಎಂದರೆ ಸರಿ. ಸದರಿ ಸುಬಾನಜೀ ರವರಿಗೆ ಮಲ್ಕಾಜೀ ಎಂಬ ಸಹೋದರ ಇದ್ದ ಎಂದರೆ ಸರಿ. ಸದರಿ ಮಲ್ಕಾಜಿ ಯವರಿಗೆ ಮಲ್ಕಪ್ಪ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲ್ಕಾಜೀ ರವರಿಗೆ ಗುಂಡೋಜಿ ಎನ್ನುವ ಒಬ್ಬನೇ ಮಗ ಎಂದರೆ ಸರಿ. ಸದರಿ ಗುಂಡೋಜಿ ರವರ ಹೆಂಡತಿ ಈ ದಾವೆಯಲ್ಲಿ 10ನೇ ಪ್ರತಿವಾದಿಯಾಗಿದ್ದಾರೆ ಎಂದರೆ ಸರಿ. ಸುಬಾನಜೀ ರವರು 1987ರಲ್ಲಿ ಜಹೀರಾಬಾದನಲ್ಲಿ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಜಹೀರಾಬಾದನಲ್ಲಿ ತೀರಿಕೊಂಡಿದ್ದು ನಿಜ, ಆದರೆ ನನಗೆ ಇಸ್ವಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸುಬಾನಜೀ ತೀರಿಕೊಳ್ಳುವ 1 ವರ್ಷದ ಮೊದಲೇ ಅಂದರೆ 1986ರಲ್ಲಿ ವಿಠಲ ಇವರು ತೀರಿಕೊಂಡರು ಎಂದರೆ ಸರಿ. ನನ್ನ ತಂದೆ 1990ರಲ್ಲಿ ತೀರಿಕೊಂಡರು ಎಂದರೆ ಸರಿ.

ನನ್ನ ಅಜ್ಜ ಮತ್ತು ಆತನ ಸಹೋದರ 1973ರಲ್ಲಿ ಟೆಂಗಳಿಯಲ್ಲಿ ಬರಗಾಲ ಬಂದ ಕಾರಣ, ಟೆಂಗಳಿ ಗ್ರಾಮವನ್ನು ಬಿಟ್ಟು ಜಹೀರಾಬಾದನಲ್ಲಿ ವಾಸಿಸಲು ಪ್ರಾರಂಭಿಸಿದರು ಎಂದರೆ ಸರಿ. ಸುಬಾನಜೀ ಮತ್ತು ಮಲ್ಕಾಜೀ ಇವರು ಜಹೀರಾಬಾದಗೆ ಹೋದಾಗ ದಾವಾ ಆಸ್ತಿಯನ್ನು ಲೀಜ್ ಗಾಗಿ ಬಿಟ್ಟು ಬಂದ ಹಣವನ್ನು ತಮ್ಮ-ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಕೇವಲ ಪಹಣಿಯಲ್ಲಿ ಗುಂಡೋಜಿ ಯವರ ಹೆಸರು ನಮೂದಾಗಿತ್ತು ಎಂದರೆ ಸಾಕ್ಷಿ ದಾವಾ ಆಸ್ತಿಯು ಗುಂಡೋಜಿ ರವರಿಗೆ ಸೇರಿದ ಆಸ್ತಿಯಾಗಿತ್ತು ಎಂದು ನುಡಿಯುತ್ತಾರೆ. ಗುಂಡೋಜಿ ರವರು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಪಹಣಿ ಪತ್ರಿಕೆಯನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಗುಂಡೋಜಿ ರವರು ನಾನು ಹೇಳುವಂತೆ ದಾವಾ ಆಸ್ತಿಯನ್ನು ಯಾರಿಂದ ಮತ್ತು ಎಂದು ಖರೀದಿ ಮಾಡಿದ್ದಾರೆ ಎಂದು

ನನಗೆ ಮಾಹಿತಿ ಇಲ್ಲ. ಸದರಿ ಗುಂಡೋಜಿ ರವರಿಂದ ನನ್ನ ತಂದೆ ಶಂಕರ ಇವರು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆಗಳು ಇಲ್ಲ ಆದರೆ ನನ್ನ ತಂದೆ ನನಗೆ ಮೌಖಿಕವಾಗಿ ಹೇಳೀದ್ದರು ಎಂದು ನುಡಿಯುತ್ತಾರೆ. ಸುಬಾನಜೀ ಮತ್ತು ಮಲ್ಕಾಜೀ ಇವರು ಕುಟುಂಬದಲ್ಲಿ ತೊಂದರೆಯಾಗಬಾರದು ಎಂದು ತಿಳಿದು, ಶಂಕರ ಇವರ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ದಿನಾಂಕ: 10-12-1981ರಂದು ರೂ. 25,000/-ಕ್ಕೆ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ. ವಿಠಲ ಅವರಿಗೆ ಕೇವಲ ಹೆಣ್ಣುಮಕ್ಕಳು ಇದ್ದ ಕಾರಣ, ಶಂಕರ ಇವರು ತೀರಿಕೊಂಡ ನಂತರ ವಿಠಳನ ಮಕ್ಕಳಿಗೆ ಆಸ್ತಿ ಸಿಗಬಾರದು ಎಂದು ಶಂಕರ ಅವರ ಹೆಂಡತಿ ಹೆಸರನ್ನು ಮಾತ್ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ನಾನು ಈ ದಾವೆಯ ನೋಟಿಸು ಬಂದ ನಂತರ ನನ್ನ ಪರವಾಗಿ ವಕೀಲರನ್ನು ಇಟ್ಟುಕೊಂಡು ಈ ದಾವೆಯನ್ನು ನಡೆಸುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿದ್ದರೂ ಸಹ ದಿ. 30-04-2018ರಲ್ಲಿ ಶ್ರೀದೇವಿ ರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ವಾದಿಗೆ ಈ ದಾವಾ ಆಸ್ತಿಯ ಬಗ್ಗೆ ಯಾವುದೇ ಹಕ್ಕು ಇಲ್ಲದಿದ್ದ ಕಾರಣ, ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-13ರಂತೆ ಖರೀದಿ ಪತ್ರ ಶ್ರೀದೇವಿ ರವರಿಗೆ ಬರೆದುಕೊಡುವಾಗ ಅವರಿಗೆ ಈ ದಾವೆಯ ಬಗ್ಗೆ ತಿಳಿಸಿರುತ್ತೇವೆ. ಮಲ್ಕಾಜೀ ಎಂದು ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನೀವು ಎಂದು ಖುದ್ದಾಗಿ ರೈತಾಪಿ ಕೆಲಸ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆ ವರ್ಷಕ್ಕೊಮ್ಮೆ ಬಂದು ದಾವಾ ಆಸ್ತಿಯನ್ನು ನೋಡಿಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಗುಂಡೋಜಿ ಇವರು 2016ರಲ್ಲಿ ದಾವೆ ಸಲ್ಲಿಸುವ 6 ತಿಂಗಳ ಮೊದಲು ತೀರಿಕೊಂಡಿರು ಎಂದರೆ ಸರಿ. ಗುಂಡೋಜಿ ಇವರು ದಾವಾ ಆಸ್ತಿಗಳಿಂದ ಬಂದ ಉತ್ಪನ್ನದ ಹಣವನ್ನು ಶಂಕರ ರವರಿಗೆ ಮತ್ತು ವಿಠಲ ಇವರಿಗೆ ತಲಾ ¼ ಮತ್ತು ಸ್ವಂತಕ್ಕೆ ½ ಭಾಗ ಇಟ್ಟುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಗುಂಡೋಜಿ ಇವರು ತೀರಿಕೊಳ್ಳುವವರೆಗೆ ದಾವಾ ಆಸ್ತಿಯ ದೇಖರೇಖನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯು ಗುಂಡೋಜಿ, ಶಂಕರ, ಮತ್ತು ವಿಠಲ ಇವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯನ್ನು ನಿಶಾನೆ ಪಿ-13ರಂತೆ ಪ್ರತಿವಾದಿ ನಂ. 11ರವರಿಗೆ ಮಾರಾಟ ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಇಂದು 2 ರಿಂದ 10 ನೇ ಪ್ರತಿವಾದಿಯವರಿಗೆ ನನ್ನ ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿ. ದಾವಾ ಆಸ್ತಿಯು ಎಂದಿಗೂ ಗುಂಡೋಜಿ ರವರ ಸ್ವಯಾರ್ಜಿತ ಆಸ್ತಿ ಇರಲಿಲ್ಲ ಮತ್ತು ಗುಂಡೋಜಿ ರವರು ನನ್ನ

ತಂದೆಗೆ ಎಂದಿಗೂ ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ¼ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರು, ನಮ್ಮ ಕುಟುಂಬ ಮತ್ತು ಗುಂಡೋಜಿ ರವರ ಕುಟುಂಬ ಜಹೀರಾಬಾದನಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ.

ಜಹೀರಾಬಾದನಲ್ಲಿ ಇರುವ ಮನೆಯ ಮೇಲೆ ಒಂದು ದಾವೆ ಆಗಿತ್ತು ಎಂದರೆ ಸರಿ. ಸದರಿ ದಾವೆಯನ್ನು ನಾವೇ ವಾದಿಯರ ಮೇಲೆ ಮಾಡಿದ್ದೇವು. ಆ ದಾವೆಯನ್ನು ಏಕೆ ಮಾಡಿದ್ದೀರಿ ಎಂದರೆ ಸಾಕ್ಷಿ ಜಹೀರಾಬಾದನಲ್ಲಿರುವ ಮನೆ ನಮ್ಮ ಅಜ್ಜನಿಗೆ ಸೇರಿತ್ತು, ಆದಕಾರಣ, ನಾವು ದಾವೆಯನ್ನು ಮಾಡಿದ್ದೇವು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾವೆಯು ನಿಖಾಲೆಯಾಗಿ ನಾವು ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.